

Journal of Emerging Technologies and Innovative Research

An International Open Access Journal Peer-reviewed, Refereed Journal

www.jetir.org | editor@jetir.org An International Scholarly Indexed Journal

Certificate of Publication

The Board of

Journal of Emerging Technologies and Innovative Research (ISSN : 2349-5162)

Is hereby awarding this certificate to

Dr. SIDDAIAH R S

In recognition of the publication of the paper entitled

Vachanagalli Saamaajika Chinthane

Published In JETIR (www.jetir.org) ISSN UGC Approved (Journal No: 63975) & 7.95 Impact Factor

Published in Volume 11 Issue 3 , March-2024 | Date of Publication: 2024-03-13

Parin P

EDITOR

EDITOR IN CHIEF



JETIR2403250 **Research Paper Weblink http://www.jetir.org/view?paper=JETIR2403250** **Registration ID : 534073**

ವಚನಗಳಲ್ಲಿ ಸಾಮಾಜಿಕ ಚಿಂತನೆ

ಡಾ. ಸಿದ್ದಯ್ಯ ಆರ್.ಎಸ್.
ಕನ್ನಡ ಅತಿಥಿ ಉಪನ್ಯಾಸಕರು
ವಿಶ್ವವಿದ್ಯಾಲಯ ಕಾನೂನು ಕಾಲೇಜು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

ಜರ್ಮನ್ ಕವಿ ಗಯಟೆಯ ಪ್ರಸಿದ್ಧವಾದ ಉಕ್ತಿವೊಂದಿದೆ "Man knows himself by action only, by thought never" ಎಂಬುದು. ಅಂದರೆ 'ಮನುಷ್ಯ ತನ್ನನ್ನು ತಾನು ಕ್ರಿಯೆಯಿಂದ ಮಾತ್ರ ತಿಳಿದುಕೊಳ್ಳುತ್ತಾನೆಯೇ ಹೊರತು, ಆಲೋಚನೆಯಿಂದಲ್ಲ' ಹಾಗಾದರೆ ವ್ಯಕ್ತಿ ಆಲೋಚಿಸದೆ ಕ್ರಿಯೆಯಲ್ಲಿ ತೊಡಗಲು ಸಾಧ್ಯವೇ ಎಂಬ ಪ್ರಶ್ನೆಯು ಮೂಡುತ್ತದೆ. ಅವನ ಪ್ರಕಾರ ವ್ಯಕ್ತಿಯ ಆಲೋಚನೆಗಳು ಕ್ರಿಯೆಗೆ ಇಳಿಯದಿದ್ದರೆ ಸತ್ತು ಹೋಗುತ್ತವೆ. ಅವನಲ್ಲಿ ಮೂಡಿದ ಆಲೋಚನೆಗಳನ್ನು ಕಾರ್ಯಗತಗೊಳಿಸುವುದು ಸೂಕ್ತವಾದ ಮಾರ್ಗವಾಗಿದೆ ಎನ್ನುವುದು ಅವನ ಈ ಹೇಳಿಕೆಯ ತಾತ್ಪರ್ಯ. ಸಾಮಾಜಿಕ ಚಿಂತನೆಯನ್ನು ಈ ಹೇಳಿಕೆಯ ಹಿನ್ನೆಲೆಯಲ್ಲಿಯೇ ನೋಡಬೇಕಾಗಿದೆ. ಏಕೆಂದರೆ ವಚನಕಾರರು ಆಲೋಚಿಸಿದ್ದನ್ನು ಕ್ರಿಯೆಗೆ ಇಳಿಸಿದ್ದಾರೆ.

ಸಾಮಾಜಿಕ ಚಿಂತನೆ ಎಂದರೆ ನಾವು ಇನ್ನೊಬ್ಬ ವ್ಯಕ್ತಿಯ ಆಲೋಚನೆಗಳು, ನಂಬಿಕೆಗಳು, ಉದ್ದೇಶಗಳು, ಭಾವನೆಗಳು, ಜ್ಞಾನ ಮತ್ತು ಕ್ರಿಯೆಗಳನ್ನು ಸನ್ನಿವೇಶದ ಸಂದರ್ಭದೊಂದಿಗೆ ಆ ವ್ಯಕ್ತಿಯ ಅನುಭವವನ್ನು ಅರ್ಥಮಾಡಿಕೊಳ್ಳಲು ಅರ್ಥೈಸಿಕೊಳ್ಳುವ ಪ್ರಕ್ರಿಯೆ. ಹಾಗೆಯೇ ಸಾಮಾಜಿಕ ಚಿಂತನೆಯು ಒಂದು ರೀತಿಯ ಮಾನಸಿಕ ಪ್ರಕ್ರಿಯೆಯಾಗಿದೆ. ಇಲ್ಲಿ ನಮ್ಮ ಸ್ವಂತ ಆಲೋಚನೆಗಳು, ಭಾವನೆಗಳು ಮತ್ತು ಉದ್ದೇಶಗಳನ್ನು ಇತರರಿಗೆ ಸಂಬಂಧಿಸಿದಂತೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ.

ಸೌಂದರ್ಯ ಮೀಮಾಂಸೆಯಲ್ಲಿನ 'ಸಹಾನುಭೂತಿ'(Sympathy) ಎಂಬ ಪಾರಿಭಾಷಿಕ ಪದವು ಸಾಮಾಜಿಕ ಚಿಂತನೆಯನ್ನೇ ಹೋಲುತ್ತದೆ. "ನಮ್ಮ ಸುತ್ತಲ ಮನುಷ್ಯರ ಮತ್ತು ಮನುಷ್ಯ ಗುಣಗಳು ಆರೋಪಿತವಾದ ಜಡವಸ್ತುಗಳ ಅನುಭವವನ್ನು ನಾವೂ ಜೊತೆಯಾಗಿ, ಬಹುಶಃ ಅಷ್ಟೇ ತೀವ್ರವಾಗಿ ಅನುಭವಿಸುವುದು, ಹಂಚಿಕೊಳ್ಳುವುದು, ಅಭಿರುಚಿ, ಧೋರಣೆ ಇಂಥ ವಿಷಯಗಳಲ್ಲಿನ ಭಾವ ಸಾಹಚರ್ಯ–ಸಹಾನುಭೂತಿ ಎನಿಸಿಕೊಳ್ಳುತ್ತದೆ."[1] ಜನರೊಂದಿಗೆ ತಾನು ಕೂಡ ಸಹ–ಅನುಭೂತಿಯನ್ನು ಹೊಂದುವುದು. ಅಂದರೆ ಅವರ ಭಾವವನ್ನು ನಾವು ಸಹ ಅನುಭವಿಸಿದಾಗ ಮಾತ್ರ ಸಾಮಾಜಿಕ ಚಿಂತನೆಯನ್ನು ನಡೆಸಲು ಸಾಧ್ಯ.

"ವಚನಕಾರರು ಕವಿಗಳಲ್ಲ, ಅವರು ಬರೆದದ್ದು ಕಾವ್ಯವಲ್ಲ. ಅವರ ಶ್ರೋತೃವರ್ಗವು ಕಾವ್ಯಾಸ್ವಾದನ ಮಾಡುವ ಪಂಡಿತವರ್ಗವಲ್ಲ. ಅವರು ಮುಖ್ಯವಾಗಿ ಸಾಮಾಜಿಕ ಪ್ರಜ್ಞೆಯುಳ್ಳ ನೀತಿ ಬೋಧಕರು; ಸಮಾಜ ವಿಮರ್ಶಕರು; ತಮ್ಮ ಅನುಭಾವವನ್ನು ಜನತೆಯ ಜೊತೆ ಹಂಚಿಕೊಳ್ಳಲು ಬಯಸಿದವರು. ಅವರ ಶ್ರೋತೃ ವರ್ಗ ಮುಖ್ಯವಾಗಿ ಸಾಮಾನ್ಯ ಜನತೆ."[2] ಹೀಗಾಗಿ ವಚನಕಾರರು ಸಾಮಾಜಿಕ ಆಂದೋಲನವನ್ನು ಮಾಡಿದರು. ಅವರ ದೃಷ್ಟಿಯಲ್ಲಿ ಆಂದೋಲನ ಎಂದರೆ ಹೊಸ

---

[1] ವಿಮರ್ಶೆಯ ಪರಿಭಾಷೆ ; ಓ.ಎಲ್. ನಾಗಭೂಷಣಸ್ವಾಮಿ ; ಪು.ಸಂ.108.
[2] ವಚನ ಸಾಹಿತ್ಯ ; ಡಾ. ಎಂ. ಚಿದಾನಂದ ಮೂರ್ತಿ ; ಪು.ಸಂ.08.

ಜೀವನವನ್ನು ಕಟ್ಟಿಕೊಳ್ಳುವುದು. ಹೊಸ ಜೀವನವೆಂದರೆ ವ್ಯಕ್ತಿಗಳನ್ನು ಆಲೋಚಿಸುವಂತೆ ಮಾಡುವುದು, ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದು. ಹೀಗಾಗಿ ಸಾಮಾಜಿಕ ಸುಧಾರಕರಾದ ವಚನಕಾರರು ತಮ್ಮನ್ನು ತಾವು ತಿದ್ದಿಕೊಂಡ ಸಾಧಕರು ಎನಿಸಿದ್ದಾರೆ.

ವಚನಕಾರರು ಲಿಂಗಾಚಾರ, ಸಮಯಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳೆಂಬ ಪಂಚಾಚಾರಗಳ ಮೂಲಕ ವ್ಯಕ್ತಿ ಲಿಂಗಾಯತ ಧರ್ಮವನ್ನು ಅನುಸರಿಸುತ್ತಾ ತನ್ನ ಸುತ್ತಲಿನ ಸಮಾಜದ ಬಗ್ಗೆ ಕಾಳಜಿಯನ್ನು ವಹಿಸುವಂತೆ ಮಾಡಿದರು. ಲಿಂಗಾಯತ ಧರ್ಮದ ಶರಣ ಲಿಂಗವಲ್ಲದೆ ಬೇರೆ ಏನನ್ನೂ ಪೂಜಿಸಬಾರದು. ಕಾಯಕದಿಂದ ಗಳಿಸಿದನ್ನು ಗುರು, ಲಿಂಗ, ಜಂಗಮಕ್ಕೆ ಸಮರ್ಪಿಸಬೇಕು. ಶಿವಭಕ್ತರಲ್ಲಿ ಜಾತಿ, ವರ್ಣಾಶ್ರಮಗಳನ್ನು ನೋಡದೆ ಅವರ ಮನೆಯಲ್ಲಿ ಊಟ ಮಾಡಬೇಕು. ಶಿವಾಚಾರದ ನಿಂದೆಯನ್ನು ಕೇಳಬಾರದು. ಶಿವಶರಣರೇ ಹಿರಿಯರು, ತಾನು ಕಿರಿಯ ಎಂಬ ಭಾವನೆಯನ್ನು ಹೊಂದುವುದು ಶರಣರಾಗಲು ಇರುವ ಯೋಗ್ಯತೆಯಾಗಿದೆ. ಈ ಯೋಗ್ಯತೆಯೇ ನೊಂದ ಜನರನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ರಕ್ಷಿಸಲು ಇರುವ ಮೂಲಮಂತ್ರವಾಗಿದೆ.

ಸ್ಪೃಶ್ಯ ಮತ್ತು ಅಸ್ಪೃಶ್ಯರನ್ನು ಶೋಷಣೆಯಿಂದ ಹೊರತರಲು ವಚನಕಾರರು ತಮ್ಮ ಅಧಿಕಾರವನ್ನು, ಮೇಲ್ಜಾತಿಯನ್ನು, ಶ್ರೀಮಂತಿಕೆಯನ್ನು ಬದಿಗೊತ್ತಿ ಸಾಮಾನ್ಯ ಜನರ ಬಳಿಗೆ ಹೋದರು. ಅವರಲ್ಲಿದ್ದ ಮೌಢ್ಯವನ್ನು ತೊಡೆದುಹಾಕಿ, ಅನಾರೋಗ್ಯಕರವಾದ ಆಚರಣೆಗಳಿಂದ ಅವರನ್ನು ಪಾರುಮಾಡಿದರು. ಪ್ರಾದೇಶಿಕ ದೈವಗಳ ಹೆಸರಿನಲ್ಲಿ ಅವರನ್ನು ಬೇರೆ ಬೇರೆ ಗುಂಪುಗಳಾಗಿ ಒಡೆಯಲಾಗಿತ್ತು. ಅಮಾನುಷ ಆಚರಣೆಗಳ ಮೂಲಕ ಅವರು ತಾವು ಕೀಳು ಎಂಬ ಭಾವನೆಯನ್ನು ಹೊಂದುವಂತೆ ಮಾಡಲಾಗಿತ್ತು. ಹಾಗಾಗಿ ಶಿವನೊಬ್ಬನೇ ದೈವ ಅವನನ್ನು ಪೂಜಿಸಿ ಮುಕ್ತಿಯನ್ನು ಹೊಂದಬಹುದು ಎಂಬ ಭಾವನೆಯನ್ನು ಸಾಮಾನ್ಯ ಜನರಲ್ಲಿ ಬಿತ್ತಲಾಯಿತು. ಕ್ರಮೇಣ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ, ನಾವು ಕೀಳಲ್ಲ ಎಂಬ ಭಾವನೆಯನ್ನು ಮೂಡಿಸಲಾಯಿತು. ಇಂತಹ ಆಂದೋಲನದ ರೂವಾರಿಯಾದ ಬಸವಣ್ಣನವರನ್ನು ಕನ್ನಡದ 'ಸಾಮಾಜಿಕ ಚಳುವಳಿಗಳ ಹರಿಕಾರ' ಎಂದು ಕರೆಯುತ್ತಿರುವುದು ಸೂಕ್ತವೇ ಆಗಿದೆ.

ದೇವಾಲಯಗಳನ್ನು ಸಾಮಾನ್ಯ ಜನರಿಗೆ ಶೋಷಣೆ ಮಾಡಲೆಂದೇ ನಿರ್ಮಾಣ ಮಾಡಲಾಗುತ್ತಿತ್ತು. ಎಲ್ಲ ಧರ್ಮದವರು ಕೂಡ ಧರ್ಮದ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿ, ತಮ್ಮ ಐಶ್ವರ್ಯಗಳನ್ನು ಪ್ರದರ್ಶನ ಮಾಡುತ್ತಿದ್ದರು. ಎಲ್ಲರಿಗೂ ಪ್ರವೇಶವಿಲ್ಲದ ಅವುಗಳು ಶೋಷಣೆಯ ರಂಗಮಂಟಪದಂತಿದ್ದವು. ಹಾಗಾಗಿ ವಚನಕಾರರು ದೇವಸ್ಥಾನಗಳನ್ನು ಬಹಿಷ್ಕರಿಸಿದರು. ಈ ರೀತಿಯ ಮೇಲ್ವರ್ಗದವರ "ಸ್ಥಾವರ ಲಿಂಗವನ್ನು ಸಂಪೂರ್ಣವಾಗಿ ನಿರಾಕರಿಸಿದ್ದು ಐಶ್ವರ್ಯ, ಅಧಿಕಾರ, ಕುಲಾಭಿಮಾನ, ಕರ್ಮ ಮುಂತಾದುವೆಲ್ಲವನ್ನೂ ಒಂದೇ ಏಟಿನಿಂದ ಅತ್ತ ತಳ್ಳಿದಂತಾಯಿತು."[3] ದೇವಾಲಯದ ಸಮಸ್ಯೆಯನ್ನು ಬಗೆಹರಿಸಿದ್ದು ಬಹುದೊಡ್ಡ ಸಾಮಾಜಿಕ ಕ್ರಾಂತಿಯೇ ಆಗಿದೆ.

"ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ, ಬಡವನಯ್ಯಾ
ಎನ್ನ ಕಾಲೆ ಕಂಬ, ದೇಹವೆ ದೇಗುಲ
ಶಿರವೆ ಹೊನ್ನ ಕಲಶವಯ್ಯಾ
ಕೂಡಲಸಂಗಮದೇವಾ, ಕೇಳಯ್ಯಾ

[3] ವಚನ ಸಾಹಿತ್ಯ ; ಡಾ. ಎಂ. ಚಿದಾನಂದ ಮೂರ್ತಿ ; ಪು.ಸಂ.41.

ಸ್ಥಾವರಕ್ಕಳಿಂಟು, ಜಂಗಮಕ್ಕಳಿವಿಲ್ಲ."

ಚಿದಾನಂದ ಮೂರ್ತಿಯವರು ಅಭಿಪ್ರಾಯಪಡುವಂತೆ ದೇವಸ್ಥಾನವು ಅಸ್ಪೃಶ್ಯರನ್ನು ಬಹಿಷ್ಕರಿಸಿದರೆ ವಚನಕಾರರು ದೇವಸ್ಥಾನವನ್ನೇ ಬಹಿಷ್ಕರಿಸಿದರು. ಮೇಲ್ವರ್ಗದವರ ಪ್ರತಿಷ್ಠೆಗೆ ಬಲಿಯಾಗಿದ್ದ ಅಸ್ಪೃಶ್ಯರಿಗೆ ಆತ್ಮವಿಶ್ವಾಸವನ್ನು ಮೂಡಿಸುವಲ್ಲಿ ಇದು ಬಹಳ ಪರಿಣಾಮಕಾರಿ ಮಾರ್ಗವಾಯಿತು. ಮನುಷ್ಯರ ದೇಹವೇ ದೇವಾಲಯ, ಅವರ ಕಾಲುಗಳೇ ದೇವಾಲಯವನ್ನು ಎತ್ತಿಹಿಡಿದಿರುವ ಕಂಬಗಳು, ಅವರ ತಲೆಯೇ ದೇವಾಲಯದ ಮೇಲಿಟ್ಟಿರುವ ಬಂಗಾರದ ಗೋಪುರ. ಅವರು ಕಟ್ಟಿರುವಂತಹ ದೇವಾಲಯಗಳು ನಶಿಸಿ ಹೋಗುತ್ತವೆ. ಆದರೆ ಇಷ್ಟಲಿಂಗವನ್ನು ಪೂಜಿಸುವ ಭಕ್ತನ ಕಾರ್ಯಗಳು ಶಾಶ್ವತವಾಗಿ ಉಳಿಯುತ್ತವೆ. ಉಳ್ಳವರು ಶಿವಾಲಯವನ್ನು ನಿರ್ಮಿಸಿಕೊಳ್ಳಲಿ, ನಾವು ನಮ್ಮ ದೇಹವನ್ನೇ ಭಗವಂತನೆಂದು ನಂಬಿ, ಸಮಾಜಮುಖಿ ಕಾರ್ಯಗಳನ್ನು ಮಾಡೋಣ ಎಂಬುದು ಬಸವಣ್ಣನವರ ಆದರ್ಶ ತತ್ವವಾಗಿದೆ.

"ಕಲ್ಯಾಣದಲ್ಲಿ ಸಂಬೋಳಿಯ ನಾಗಿದೇವನೆಂಬ ಮಹಾಶಿವಭಕ್ತನಿದ್ದನು. ಅವನು ಜಾತಿಯಲ್ಲಿ ಹೊಲೆಯ. ಬಸವಣ್ಣನವರು ಆ ಭಕ್ತನಿದ್ದ ಹೊಲೆಗೇರಿಗೆ ಆಗಾಗ್ಗೆ ಹೋಗಿ ಅವನ ದರ್ಶನ ಮಾಡಿಕೊಂಡು, ಅವನಿಂದ ಪ್ರಸಾದ ಸ್ವೀಕರಿಸಿ ಬರುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದರು."[4] ಇವರ ದೃಷ್ಟಿಯಂತೆಯೇ 'ಶಿವಭಕ್ತರಲ್ಲದ ವಿಪ್ರರು ಹೊಲೆಯರು, ಶಿವಭಕ್ತರಾದ ಹೊಲೆಯರು ಉತ್ತಮರು' ಎಂಬುದು ವಚನ ಸಾಹಿತ್ಯದ ಸಾಮಾಜಿಕ ಚಿಂತನೆಯಾಗಿದೆ. ಬಸವಣ್ಣನವರ ಪ್ರಕಾರ ಕೂಡಲ ಸಂಗಮದೇವ ಕರುಣಿಸಿದವನೇ ಸತ್ಕುಲವಂತನು. ಅವನಿದ್ದ ಕುಲವೇ ಸತ್ಕುಲ. ವಚನಕಾರರ ಶರಣಸತಿ–ಲಿಂಗಪತಿ ಎಂಬ ಭಾವವೇ ಪುರುಷಾಹಂಕಾರವನ್ನು ತೊಲಗಿಸುವುದಾಗಿತ್ತು. ಶಿವ ಭಾವದಲ್ಲಿ ಮಾನವರೆಲ್ಲರೂ ಸಮಾನರೇ ಎಂದು ಹೇಳುವುದು ಅವರ ಉದ್ದೇಶವಾಗಿತ್ತು. ಭಕ್ತಿಯ ಹೆಸರಿನಲ್ಲಿ ಸುಲಿಗೆ ಮಾಡುವವರನ್ನು ಕಾಗೆ ಬಂಗಾರವೆಂದು ಜರಿದು, ನಿರ್ಮಲ ಭಕ್ತಿಗೆ ಚಿನ್ನದ ಲೇಪನವನ್ನು ಮಾಡಿದ್ದಾರೆ.

ಬಸವಣ್ಣ ತನ್ನ ಅನುಯಾಯಿಗಳಿಗೆ ಸಲಹೆಯನ್ನು ನೀಡುತ್ತಿರುವ ರೀತಿಯಂತೆ ಈ ಕೆಳಗಿನ ವಚನವಿದೆ ;

"ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದರೆ ನಿಲಬಾರದು.
ಏರಿ ನೀರುಂಬಡೆ, ಬೇಲಿ ಕೈಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ
ತಂದೆ ಕೂಡಲಸಂಗಮದೇವ
ನೀ ಹುಟ್ಟಿಸಿ ಜೀವನ ಭವದುಃಖಿಯ ಮಾಡಿದ ಬಳಿಕ
ಬಿಡಿಸುವರಾರುಂಟು?"[5]

ಸಾಮಾಜಿಕ ಆಂದೋಲನವನ್ನು ಪ್ರಭುತ್ವ ಮತ್ತು ಸಂಪ್ರದಾಯಸ್ಥರ ವಿರೋಧವನ್ನು ಲೆಕ್ಕಿಸದೆ ನಡೆಸುತ್ತಿರುವುದು ಈ ಸಮಾಜದಲ್ಲಿ ಶತಮಾನಗಳಿಂದಲೂ ಬೇರುಬಿಟ್ಟಿರುವ ಮೇಲು–ಕೀಳು, ಭೇದಭಾವಗಳನ್ನು ತೊಡೆದುಹಾಕಲು ಎಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಆದರೆ ಶಿವಭಕ್ತರೇ ಶೋಷಕರಾದರೆ ಅದನ್ನು ಯಾರಿಗೆ ಹೇಳಿಕೊಳ್ಳಬೇಕು? ಈಗಾಗಲೇ ವೈದಿಕಾಚರಣೆಯೆಂಬ ಒಲೆ ಹತ್ತಿ ಉರಿಯುತ್ತಿದೆ, ಭೂತಾಯಿಯಂತೆ ಪ್ರೀತಿಯನ್ನು ಹೊಂದಿರುವ ಶಿವಭಕ್ತರು ಶೋಷಿತರನ್ನು

[4] ಬಸವಣ್ಣನವರ ವಚನಗಳು ; (ಸಂ) ಡಾ. ಎಲ್. ಬಸವಾರಾಜು ; ಪೀಠಿಕೆ ; ಜೀವನ ದರ್ಶನ ; ಪು.ಸಂ.21.

[5] ಬಸವಣ್ಣನವರ ವಚನಗಳು ; (ಸಂ) ಡಾ. ಎಲ್. ಬಸವಾರಾಜು ; ಭಕ್ತಸ್ಥಲ ; 16ನೆಯ ವಚನ ; ಪು.ಸಂ.54.

ಹರಿದು ತಿಂದರೆ ಮಾನವ ಸಮಾಜ ಉಳಿಯುವುದಿಲ್ಲ. ನೀರನ್ನು ಹಿಡಿದಿಟ್ಟುಕೊಳ್ಳಬೇಕಾದ ಕೆರೆಯ ಏರಿಯೇ ನೀರನ್ನು ಹೀರಿದರೆ! ರಕ್ಷಣೆಗೆ ಹಾಕಿದ್ದ ಬೇಲಿಯೇ ಫಸಲನ್ನು ಮೇಯ್ದರೆ! ಮನೆಯನ್ನು ಬೆಳಗುವ ದೇವತೆಯೇ ಮನೆಯಲ್ಲಿರುವ ವಸ್ತುವನ್ನು ಕದ್ದರೆ! ಅಮೃತತ್ವವನ್ನು ಹೊಂದಿರುವ ತಾಯಿಯ ಎದೆಯಾಲು ವಿಷವಾಗಿ ಕೊಂದರೆ! ಇನ್ಯಾರಿಗೆ ದೂರನ್ನು ಕೊಡಲು ಸಾಧ್ಯ? ಶಿವಭಕ್ತನು ನೊಂದಿರುವ, ದುಃಖಿಸುತ್ತಿರುವ ಸಮುದಾಯವನ್ನು ರಕ್ಷಿಸಬೇಕು. ನೀನೇ ಶೋಷಕನಾದರೆ ಅವರನ್ನು ಶೋಷಣೆಯಿಂದ ಮುಕ್ತಿಗೊಳಿಸುವವರು ಇನ್ಯಾರಿಲ್ಲ ಎಂದು ಬಸವಣ್ಣನವರು ಶಿವಭಕ್ತರಿಗೆ ಮಾರ್ಗದರ್ಶನವನ್ನು ನೀಡಿದ್ದಾರೆ.

"ತಾಳಮರದ ಕೆಳಗೆ ಒಂದು ಹಾಲ ಹರವಿಯಿದ್ದರೆ
ಅದ ಹಾಲ ಹರವಿಯೆನ್ನರು; ಸುರೆಯ ಹರವಿಯೆಂಬರು.
ಈ ಭಾವಸಂದೆಯವ ಮಾಣಿಸಾ ಕೂಡಲಸಂಗಮದೇವ."[6]

ವಚನಕಾರರ ನಡೆ–ನುಡಿ ಏಕಮುಖವಾಗಿತ್ತು ಎಂಬುದಕ್ಕೆ ಈ ವಚನ ಉತ್ತಮ ಉದಾಹರಣೆಯಾಗಿದೆ. ಹೆಂಡವನ್ನು ಕುಡಿಯಬಾರದು ಎಂದು ಹೇಳುವ ಶಿವಭಕ್ತ ತಾಳಮರದ ಕೆಳಗೆ ಏಕೆ ಹೋಗಬೇಕು? ನೋಡಿದ ಜನರು ಏನೆಂದುಕೊಂಡಾರು? ಅಲ್ಲಿಗೆ ಹೋಗಿ ಹಾಲನ್ನು ಕುಡಿದೆ ಎಂದರೆ ಜನರು ನಂಬುವರೇ? ಶಿವಭಕ್ತನಿಗೆ ನಂಬಿಕೆಯೇ ಜೀವಾಳ. ಈ ರೀತಿಯ ಸಂದಿಗ್ಧ ಬುದ್ಧಿಯು ಶಿವಭಕ್ತರಿಗೆ ಬಾರದಿರಲಿ ಎಂದು ಬಸವಣ್ಣ ಪ್ರಾರ್ಥಿಸುತ್ತಿದ್ದಾನೆ.

"ಬಡತನಕ್ಕೆ ಉಂಬುವ ಚಿಂತೆ ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ಶಿವಶರಣನು."[7]

ಆಸೆಗೆ ಕೊನೆಯಿಲ್ಲ, ಅವುಗಳು ಒಂದಕ್ಕೊಂದು ಕೂಡಿಕೊಂಡು ಹೋದಷ್ಟು ಮನುಷ್ಯನನ್ನು ದಿಕ್ಕು ತಪ್ಪಿಸುತ್ತವೆ. ವಚನಕಾರರ ಪ್ರಕಾರ ಶಿವನ ಧ್ಯಾನವೆಂದರೆ ಸಮಾಜದ ಕಳಕಳಿ ಎಂದೇ ಅರ್ಥ. ಸಮಾಜದ ಬಗ್ಗೆ ಒಬ್ಬರಿಗೂ ಚಿಂತೆಯಿಲ್ಲ ಎಂಬುದು ಅಂಬಿಗರ ಚೌಡಯ್ಯನ ಕಳವಳ. ಬರೀ ತಾನು, ತನ್ನ ಹೆಂಡತಿ, ತನ್ನ ಮಕ್ಕಳು ಹೀಗೆಯೇ ಮನುಷ್ಯನ ಆಸೆಗಳು ಬೆಳೆಯುತ್ತಾ ಹೋಗುತ್ತವೆಯೇ ಹೊರತು, ಸಮಾಜದ ಬಗೆಗೆ ಚಿಂತಿಸುವವನನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಇಂದಿನ ಸಂದರ್ಭದಲ್ಲಿಯೂ ಕೂಡ ಈ ಮಾತು ನಿಜವಾಗುತ್ತಿದೆ. ರಸ್ತೆಯಲ್ಲಿ ಬಿದ್ದವರನ್ನು ಕೂಡ ಎತ್ತದ್ದಂತಹ ನತದೃಷ್ಟ ಸಮಾಜ ನಿರ್ಮಾಣವಾಗುತ್ತಿದೆ.

ಆಯ್ದಕ್ಕಿ ಲಕ್ಕಮ್ಮ ಮನುಷ್ಯರ ಆಸೆಯನ್ನು ಕಟ್ಟುವಾಗಿ ನಿಂದಿಸುತ್ತಾಳೆ. ಒಂದು ದಿನ ತನ್ನ ಗಂಡ ಆಯ್ದಕ್ಕಿ ಮಾರಯ್ಯ ಒಂದು ದಿನಕ್ಕೆ ಆಗುವಷ್ಟಕ್ಕಿಂತ ಹೆಚ್ಚಿನ ಅಕ್ಕಿಯನ್ನು ಆಯ್ದು ತಂದಾಗ 'ಆಸೆ ಅರಸನಿಗಿರಬಹುದು, ಅದು ಅವನ ಮನಸ್ತತ್ವ. ಆದರೆ ಶಿವಭಕ್ತರಾದ ಶರಣರಿಗೆ ಆಸೆಯೆಂಬುದು ಇರಬಾರದು. ದಾಂಡಿಗನಿಗೆ ರೋಷವಿರಬಹುದು, ಆದರೆ ಶತ್ರುವೇ ಇಲ್ಲದ ಶಿವಭಕ್ತಿಗೆ ರೋಷವಿರಬಾರದು. ಇಷ್ಟೊಂದು ಅಕ್ಕಿಯ ಆಸೆ ನಿಮಗೇಕೆ ಬಂತು? ಇದನ್ನು ಶಿವ ಒಪ್ಪುವುದಿಲ್ಲ ಎಂದು ಖಡಾಖಂಡಿತವಾಗಿ ಅವನ ದುರಾಸೆಯನ್ನು ನಿಂದಿಸುತ್ತಾಳೆ. ಮುಂದುವರಿದು;

[6] ಬಸವಣ್ಣನವರ ವಚನಗಳು ; (ಸಂ) ಡಾ. ಎಲ್. ಬಸವಾರಾಜು ; ಭಕ್ತಸ್ಥಲ ; 54ನೆಯ ವಚನ ; ಪು.ಸಂ.62.
[7] ವಚನ ಸಾಹಿತ್ಯ ; ಡಾ. ಎಂ. ಚಿದಾನಂದ ಮೂರ್ತಿ ; ಅಂಬಿಗರ ಚೌಡಯ್ಯ ; ಪು.ಸಂ.100.

"ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?
ಬೆಟ್ಟ ಬಲ್ಲಿತ್ತೆಂದರೆ ಉಳಿಯ ಮೊನೆಯಲ್ಲಿ ಬಡತನವಿದ್ದರೆ ಒಡೆಯದೆ?
ಘನ ಶಿವಭಕ್ತರಿಗೆ ಬಡತನವಿಲ್ಲ
ಸತ್ಯರಿಗೆ ದುಷ್ಕರ್ಮವಿಲ್ಲ
ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕರ
ನನಗಾರ ಹಂಗಿಲ್ಲ ಮಾರಯ್ಯ."[8]

ಗಂಡನಿಗೆ ಸರಿಸಮಾನವಾಗಿ ಮಾತನಾಡುವ ಲಕ್ಷ್ಮಮ್ಮನನ್ನು ಕಂಡರೆ ದಿಗ್ಭ್ರಮೆವುಂಟಾಗದಿರದು. ಮನೆಯಲ್ಲಿ ಬಡತನವಿದೆಯೆಂದು ಅತಿಯಾಸೆ ಪಡುವುದು ಸರಿಯಲ್ಲ. ಬಡತನ ಮನೆಗೆ ಹೊರತು, ನಮ್ಮ ಮನಸ್ಸಿಗಲ್ಲ, ನಾವು ನಂಬಿರುವ ಸಿದ್ಧಾಂತವನ್ನು ಬಿಟ್ಟುಕೊಟ್ಟು ಬೂಟಾಟಿಕೆಯ ಜೀವನವನ್ನು ಸಾಗಿಸಬಾರದು. ನಮಗೆ ಬಡತನವಿರಬಹುದು ಆದರೆ ಬೆಟ್ಟವನ್ನೇ ಕರಗಿಸಿಬಿಡುವ ಆತ್ಮಸ್ಥೈರ್ಯ ನಮಗಿದೆ. ಶಿವನನ್ನು ನಂಬಿರುವವರು ಬಡತನಕ್ಕೆ ಅಂಜಬಾರದು. ಸತ್ಯವಂತರು ಒಳ್ಳೆಯ ಕೆಲಸವನ್ನೇ ಮಾಡಬೇಕು. ಅಮರೇಶ್ವರ ಇಷ್ಟಲಿಂಗವಿರಲು ಇನ್ನೊಬ್ಬರ ಹಂಗಿನಲ್ಲಿ ನಾನು ಇರುವುದಿಲ್ಲ ಎನ್ನುತ್ತಾಳೆ.

ಮೊರದಲ್ಲಿ ಮಾರಿಯನ್ನಿಟ್ಟುಕೊಂಡು ಡಕ್ಕೆಯನ್ನು ಬಾರಿಸುತ್ತ, ಮಾರಿಯನ್ನು ಕುಣಿಸುವ ಕಾಯಕವನ್ನು ಮಾಡುತ್ತಿದ್ದ ಡಕ್ಕೆಯ ಬೊಮ್ಮಣ್ಣ ಅಂದಿನ ಕಾಲದಲ್ಲೇ ಹೆಣ್ಣಿನ ಬಗ್ಗೆ ಅದ್ಭುತವಾದ ಚಿಂತನೆಯನ್ನು ನಡೆಸಿದ್ದಾನೆ.

"ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?
ಪತಿಯಿಂದ ಬಂದ ಸೋಂಕು ಸತಿಗೆ ಕೇಡಲ್ಲವೆ?
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದು ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು."[9]

ಬೊಮ್ಮಣ್ಣನ ಈ ವಚನ ಗಂಡು ಹೆಣ್ಣಿನ ಸಂಬಂಧವು ಹೇಗಿರಬೇಕೆಂದು ಹೇಳುತ್ತದೆ. ಡಕ್ಕೆ ಬಾರಿಸುವವನ ಬಾಯಲ್ಲಿ ಕಲ್ಕಿಯೇ ನುಡಿಯುತ್ತಿದ್ದಾನೆ ಎಂಬಂತೆ ಭಾಸವಾಗದಿರದು. ಹೆಣ್ಣಿನ ಗುಣದ ಪರೀಕ್ಷೆಯನ್ನು ಗಂಡು ಮಾಡುವಂತೆ, ಗಂಡಿನ ಗುಣದ ಪರೀಕ್ಷೆಯನ್ನು ಮಾಡುವ ಅಧಿಕಾರವನ್ನು ಪಡೆದಿರುವಳು. ಹೆಣ್ಣು ಮತ್ತು ಗಂಡು ಇಬ್ಬರೂ ಒಂದೇ ದೇಹದ ಎರಡು ಕಣ್ಣುಗಳಿದ್ದಂತೆ, ಒಂದು ಕಣ್ಣಿಗೆ ಊನವಾದರೆ, ಇನ್ನೊಂದು ವಿಕಲಗೊಳ್ಳುತ್ತದೆ. ಆದ್ದುದರಿಂದ ಗಂಡು ಹೆಣ್ಣು ಇಬ್ಬರೂ ಸಮಾನರು ಎಂಬ ಆಲೋಚನೆಯನ್ನು ಮಾಡಿದ್ದಾನೆ.

ನಗಿಸುವ ಕಾಯಕವನ್ನು ಮಾಡಿಕೊಂಡಿದ್ದ ನಗೆಯ ಮಾರಿತಂದೆ ಈ ಸಮಾಜದಲ್ಲಿ ಪುರೋಹಿತಶಾಹಿ ಮುಗ್ಧ ಜನರನ್ನು ವಂಚಿಸುವ ಕಳ್ಳರ ಪಂಥ ಎಂದು ಎಂದು ಹೇಳಿರುವುದನ್ನು ಕಾಣಬಹುದು.

"ಕಲ್ಲಿಯ ಹಾಕಿ ನೆಲ್ಲಿ ತಳಿದು ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮಂತ್ರದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ

---

[8] ವಚನ ಸಾಹಿತ್ಯ ; ಡಾ. ಎಂ. ಚಿದಾನಂದ ಮೂರ್ತಿ ; ಇತರ ವಚನಕಾರರು ; ಪು.ಸಂ.104.

[9] ವಚನ ಸಾಹಿತ್ಯ ; ಡಾ. ಎಂ. ಚಿದಾನಂದ ಮೂರ್ತಿ ; ಡಕ್ಕೆಯ ಬೊಮ್ಮಣ್ಣ ; ಪು.ಸಂ.112.

ಅದೇತರ ನುಡಿ, ಮಾತಿನ ಮರೆ ಆತುರವೈರಿ ಮಾರೇಶ್ವರಾ."[10]

ಮುಗ್ಧ ಗುಬ್ಬಿಯನ್ನು ಹಿಡಿಯಲು ಅದಕ್ಕೆ ಭತ್ತದ ಆಮಿಷವನ್ನು ತೋರಿಸಲಾಗುತ್ತದೆ. ಅರಿಯದ ಗುಬ್ಬಿ ಅಗಲ ದಾರದ ಬಲೆಯ ಕೆಳಗೆ ಹರಡಿರುವ ಭತ್ತವನ್ನು ಹೆಕ್ಕಲು ಹೋಗುತ್ತದೆ. ಹಸಿದಿರುವ ಗುಬ್ಬಿಯನ್ನು ಬೇಗನೇ ಮರುಳು ಮಾಡಬಹುದು ಎಂಬುದು ಲೋಕಕ್ಕೆ ತಿಳಿದಿರುವ ಸತ್ಯ ಸಂಗತಿ. ಹಾಗೆಯೇ ಮುಗ್ಧ ಜನರನ್ನು ಅವರ ಕಷ್ಟ ನಿವಾರಣೆಯ ಆಸೆಯನ್ನು ತೋರಿಸಿ, ಮಾತಿನ ಅದ್ವೈತದ ಮೂಲಕ ಅರ್ಥವಾಗದ ಸಂಸ್ಕೃತ ಮಂತ್ರಗಳನ್ನು ಪಠಿಸಿ ಅವರನ್ನು ಪುರೋಹಿತಶಾಹಿ ಮರುಳು ಮಾಡುತ್ತಿದೆ. ಇಲ್ಲಿ ಅದ್ಭುತವಾದ ರೂಪಕವನ್ನು ಕೊಡಲಾಗಿದೆ; ಇಲ್ಲಿನ ಬಲೆ ಎಂದರೆ ಮಾತಿನ ಅದ್ವೈತ, ಸಂಸ್ಕೃತದ ಮಂತ್ರವು ಹರಡಿರುವ ನೆಲ್ಲು, ಅರಿಯದ ಜನರೇ ಗುಬ್ಬಿಗಳು. ನಗೆಯ ಮಾರಿತಂದೆ ನೇರವಾಗಿ ಪುರೋಹಿತರನ್ನು ಕಳ್ಳರು ಎಂದು ನಿಂದಿಸಿ, ಅವರ ಬೆನ್ನಿಗೆ ಚಾಟಿಯೇಟನ್ನು ಕೊಟ್ಟಿದ್ದಾನೆ.

ಒಟ್ಟಾರೆ ಸಾಮಾನ್ಯ ಜನರನ್ನು ಅಧಿಕಾರ, ಐಶ್ವರ್ಯ ಹಾಗೂ ಧಾರ್ಮಿಕ ಚಟುವಟಿಕೆಗಳಿಂದ ದೂರವಿಡಲಾಗಿತ್ತು. ಅವರು ಶ್ರೀಮಂತರು ಕಟ್ಟಿಸಿದ ದೇವಾಲಯಗಳಿಗೆ ದೇಣಿಗೆ ನೀಡಬೇಕಾಗಿತ್ತು. ಅವರು ದುಡಿದು ದೇಶದ ಸಂಪತ್ತು ಹೆಚ್ಚಿಸಿ, ಯುದ್ಧಗಳಲ್ಲಿ ಹೋರಾಡಿ ಸಾಯುತ್ತಿದ್ದರೆ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಗಗಳು ಸಂಪತ್ತು, ಸೌಲಭ್ಯಗಳನ್ನು ಪಡೆದುಕೊಂಡು ಸುಖವಾಗಿದ್ದವು. ದುಡಿದು ಸಾಯುವವರಿಗೆ ಕಿಮ್ಮತ್ತಿಲ್ಲ, ಆದರೆ ಸುಖದ ಸುಪ್ಪತ್ತಿಗೆಯಲ್ಲಿರುವವರಿಗೆ ಸಕಲ ಸನ್ಮಾನ, ಗೌರವಗಳನ್ನು ನೀಡಲಾಗುತ್ತಿತ್ತು. ಹೀಗಾಗಿ ವಚನಕಾರರು ತಾವು ನಂಬಿದ್ದಂತಹ ನಂಬಿಕೆಗಾಗಿ, ಆದರ್ಶಕ್ಕಾಗಿ ಎದೆಸೆಡೆದು ನಿಂತು, ತಮ್ಮ ಸುಖದ ತ್ಯಾಗಕ್ಕೂ ಸಿದ್ಧರಾದರು. ಜನಸಾಮಾನ್ಯರು ಹೊಸ ಜೀವನವನ್ನು ಕಟ್ಟಿಕೊಳ್ಳಲು ತಮ್ಮ ಐಶ್ವರ್ಯ, ಅಂತಸ್ತುಗಳನ್ನು ಮಾತ್ರವಲ್ಲ, ತಮ್ಮ ಪ್ರಾಣವನ್ನೇ ಪಣವಾಗಿಟ್ಟರು. ಇವರ ದೃಷ್ಟಿಯಲ್ಲಿ ಹೊಸ ಜೀವನ ಎಂದರೆ ಜನರು ಆಲೋಚಿಸುವಂತೆ ಮಾಡುವುದು. ಆದ್ದುದರಿಂದ ಜನರು ಆಲೋಚಿಸುವಂತೆ ಮಾಡಲು ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿದರು.

ನಡೆಯೊಂದು ನುಡಿಯೊಂದ್ದಾಗಿದ್ದರೆ ವಚನಕಾರರ ಆಂದೋಲನ ಯಶಸ್ವಿಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅವರು ನುಡಿದಂತೆ ನಡೆದು, ಜನಸಾಮಾನ್ಯರನ್ನು ಹೊಸ ಆಲೋಚನೆ ಮಾಡುವಂತೆ ಪ್ರೇರೇಪಿಸಿದರು. ಜನರಿಗೆ ವಚನಕಾರರ ಮೇಲೆ ನಂಬಿಕೆ ಇದ್ದುದರಿಂದ ಅವರ ಮಹತ್ವಕಾಂಕ್ಷೆಯಾದ ಸರ್ವರಿಗೂ ಸಮಾನತೆ, ವೈಚಾರಿಕ ಮನೋಭಾವ, ಸರಳಜೀವನದ ಭಕ್ತಿ ಇವುಗಳನ್ನು ಸಾಧಿಸಲು ಸಾಧ್ಯವಾಯಿತು. ಸಾಮಾಜಿಕವಾಗಿ ಅತ್ಯಂತ ತಳಮಟ್ಟದಲ್ಲಿದ್ದಂತಹ ವರ್ಗವನ್ನು ಮುಟ್ಟಿ, ಎಚ್ಚರಿಸಿ, ಅವರ ಮನೆಗೆ ಹೋಗಿ ಅವರೊಂದಿಗೆ ಊಟ ಮಾಡಿ, ಅವರನ್ನು ತಮ್ಮ ಮನೆಯೊಳಗೆ ಬಿಡಿಸಿಕೊಂಡ ಲಿಂಗಾಯತರು ಪ್ರಪಂಚದಲ್ಲಿ ಯಾರೂ ಮಾಡಲಾಗದಂತಹ ಬಹುದೊಡ್ಡ ಶ್ರೇಷ್ಠವಾದ ಸಾಮಾಜಿಕ ಆಂದೋಲನವನ್ನು ಮಾಡಿದರು. ಎಚ್ಚೆತ್ತ ಸಮಾಜವನ್ನು ಸೃಷ್ಟಿಮಾಡಿದ ವಚನಕಾರರು ತಳಸಮುದಾಯದ ಜನರು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ನೆರವಾದರು. ಮುಂದೆ ವಚನಕಾರರ ಆಂದೋಲನ ಒಂದು ಮತವಾಗಿ ಮುಂದುವರಿಯಿತು ಎಂದು ಹೇಳುವುದರಲ್ಲಿ ಯಾವುದೇ ಅನುಮಾನವಿಲ್ಲದಿದ್ದರೂ, ಇವರಲ್ಲಿ ಮತೀಯ ನಿಷ್ಠೆಗಿಂತ ಸಾಮಾಜಿಕ ನಿಷ್ಠೆಯೇ ಅಧಿಕವಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು.

[10] ವಚನ ಸಾಹಿತ್ಯ ; ಡಾ. ಎಂ. ಚಿದಾನಂದ ಮೂರ್ತಿ ; ನಗೆಯ ಮಾರಿತಂದೆ ; ಪು.ಸಂ.120.

ಗ್ರಂಥ ಋಣ :

1. ಚಿದಾನಂದ ಮೂರ್ತಿ ಎಂ. ; ವಚನ ಸಾಹಿತ್ಯ ; ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ–5 ; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಮುದ್ರಣ ವರ್ಷ : 2008 (ತೃತೀಯ ಮುದ್ರಣ)
2. ತ.ಸು. ಶಾಮರಾಯ ; ಶಿವಶರಣರ ಕಥಾರತ್ನಕೋಶ ; ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು ; ಮುದ್ರಣ ವರ್ಷ : 2008 (ಹತ್ತನೆಯ ಪರಿಷ್ಕೃತ ಮುದ್ರಣ)
3. ಬಸವರಾಜು ಎಲ್ (ಸಂಪಾದಕರು) ; ಬಸವಣ್ಣನವರ ವಚನಗಳು (ಬಸವೇಶ್ವರ ವಚನ ಸಂಗ್ರಹ) ; ಸಪ್ನ ಬುಕ್ ಹೌಸ್, ಬೆಂಗಳೂರು ; ಮುದ್ರಣ ವರ್ಷ : ಏಪ್ರಿಲ್ 2016 (ಹನ್ನೆರಡನೇ ಮುದ್ರಣ)
4. ಬಸವರಾಜ ಕಲ್ಗುಡಿ ; ಅನುಭಾವ, ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ ; ಮುರುಘಾಮಠ ಪ್ರಕಾಶನ, ಚಿತ್ರದುರ್ಗ ; ಮುದ್ರಣ ವರ್ಷ : 2019

